

# ಶಾಲಾ ಬೋಧನೆಯಲ್ಲಿ ಲಿಂಗ ತಾರತಮ್ಯ: ಕಾರಣಗಳು ಮತ್ತು ಪರಿಣಾಮಗಳು

**ಜ್ಯೋತ್ಸ್ನಾ ಲತಾ ಬೆಳ್ಳಿಯಪ್ಪ**

ಇಪ್ಪತ್ತು ಮತ್ತು ಇಪ್ಪತ್ತೊಂದನೆಯ ಶತಮಾನದ ಭಾರತದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ನಮಗೆ ಕಾಣಿಸುತ್ತದೆ.ಇದಕ್ಕೆ ಕಾರಣಗಳು ಹಲವು: ಶಾಲೆಗಳಲ್ಲಿ ಹೆಣ್ಣುಮಕ್ಕಳ ಹಾಜರಾತಿ ಹೆಚ್ಚಿಸಬೇಕಾದರೆ, ಪ್ರತಿ ಪ್ರಾಥಮಿಕ ಶಾಲೆಯಲ್ಲಿ ಒಬ್ಬರಾದರೂ ಶಿಕ್ಷಕಿ ಇರಬೇಕು ಎಂಬ ಸರಕಾರದ ನೀತಿಯ ಕಾರಣದಿಂದಾಗಿ, ಈ ಗುರಿಯನ್ನು ಸಾಧಿಸಲು ಮಹಿಳಾ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ವಿಶೇಷವಾಗಿ ಸ್ಥಾಪಿಸಲಾಯಿತು ಮತ್ತು ಶಿಕ್ಷಕಿಯರು ದೂರದ ಪ್ರದೇಶಗಳಲ್ಲಿ ನಿಯೋಜನೆಗೊಳ್ಳುವುದನ್ನು ಪ್ರೋತ್ಸಾಹಿಸಲು ಅವರಿಗೆ ವಿಶೇಷ ಪ್ರೋತ್ಸಾಹಕಗಳನ್ನು ನೀಡಲಾಯಿತು. (Manjrekar, 2013). ಸರಕಾರಿ ನೀತಿಗಳ ಜೊತೆಗೆ, ಸಾಮಾಜಿಕ ನಂಬಿಕೆ ಮತ್ತು ಆಚರಣೆಗಳು ಕೂಡ ಮಹಿಳೆಯರು ಶಿಕ್ಷಕವೃತ್ತಿಗೆ ಸೇರುವುದನ್ನು ಪ್ರೋತ್ಸಾಹಿಸಿದವು. ಶಿಕ್ಷಕ ವೃತ್ತಿಯಲ್ಲಿ ಕೆಲಸದ ಒತ್ತಡ ಕಡಿಮೆ ಹಾಗಾಗಿ ಅವರು ತಮ್ಮ ಕೌಟುಂಬಿಕ ಜವಾಬ್ದಾರಿಗಳನ್ನು ಸರಿದೂಗಿಸುವುದು ಸುಲಭವಾಗುತ್ತದೆ ಎನ್ನುವ ಕಾರಣಕ್ಕಾಗಿ ಮಧ್ಯಮ ವರ್ಗವು ಮಹಿಳೆಯರು ಈ ವೃತ್ತಿಯನ್ನು ಆಯ್ದುಕೊಳ್ಳುವುದನ್ನು ಉತ್ತೇಜಿಸಿತು (ಶಿಕ್ಷಕರು ಶಾಲೆಯಲ್ಲಿ ಕಳೆಯುವ ಸಮಯ ಇತರ ವೃತ್ತಿಪರರು ಅವರ ಕಛೇರಿಗಳಲ್ಲಿ ಕಳೆಯುವ ಸಮಯಕ್ಕಿಂತ ಕಡಿಮೆ). ನಾನು ಕೂಡ ವೈಯಕ್ತಿಕವಾಗಿ ನನ್ನ ಶಿಕ್ಷಕವೃತ್ತಿಯುದ್ದಕ್ಕೂ ಹಲವು ಬಾರಿ 'ಮಹಿಳೆಯರಿಗೆ ಆದರ್ಶಪ್ರಾಯವಾದ ವೃತ್ತಿ' ಆರಿಸಿಕೊಂಡಿದ್ದೇನೆ ಎಂದು ಜನರಿಂದ ಪ್ರಶಂಸೆಗೆ ಒಳಗಾಗಿದ್ದೇನೆ.

ಸಾಮಾಜಿಕ ಮೌಲ್ಯಗಳು ಮತ್ತು ಸರ್ಕಾರಿ ನೀತಿಗಳ ಕಾರಣಕ್ಕಾಗಿ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಪಾಲು ಸಾಕಷ್ಟು ಹೆಚ್ಚಿದೆ. 2012-13 ರ DISE ದತ್ತಾಂಶದ ಪ್ರಕಾರ ಭಾರತದಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲಿ ಸುಮಾರು ಶೇ 50ರಷ್ಟು ಮತ್ತು ಮಾಧ್ಯಮಿಕ ಹಂತದಲ್ಲಿ ಸುಮಾರು ಶೇ 40ರಷ್ಟು ಮಹಿಳಾ ಶಿಕ್ಷಕಿಯರಿದ್ದಾರೆ (ಈ ದತ್ತಾಂಶವು ಕರಾರು ನೇಮಕಾತಿ ಶಿಕ್ಷಕರನ್ನು ಬಿಟ್ಟಿದೆ, ಕೇವಲ ಕಾಯಂ ಶಿಕ್ಷಕರನ್ನು ಮಾತ್ರ ಪರಿಗಣಿಸಿದೆ). ಇದಕ್ಕಿಂತ ಮೊದಲು 2008-09ರಲ್ಲಿ DISE ಪ್ರಕಟಿಸಿದ ವಿಶ್ಲೇಷಣಾತ್ಮಕ ವರದಿಯ ಪ್ರಕಾರ ನಗರ ಪ್ರದೇಶದಲ್ಲಿ ಸುಮಾರು ಶೇ 66.15ರಷ್ಟು ಪ್ರಾಥಮಿಕ ಶಾಲಾ ಅಧ್ಯಾಪಕರು ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇ 37.2ರಷ್ಟು ಪ್ರಾಥಮಿಕ ಶಾಲಾ ಶಿಕ್ಷಕರು ಮಹಿಳೆಯರಾಗಿದ್ದಾರೆ. ಮಹಿಳೆಯರು ಇಷ್ಟು ಬಹುಸಂಖ್ಯೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿದ್ದರೂ, ಇಲ್ಲಿ ಲಿಂಗಸಮಾನತೆ ಎಂಬುದು ಇನ್ನೂ ದೂರದ ಕನಸು.

ಇದಕ್ಕೆ ಇರುವ ಒಂದು ಕಾರಣವೆಂದರೆ, ಮೇಲಿನ ಅಂಕಿಸಂಖ್ಯೆಗಳೇ ಹೇಳುವಂತೆ, ಶಿಕ್ಷಕಿಯರ ಸಂಖ್ಯೆ ಪ್ರಾಥಮಿಕ ಹಂತದಲ್ಲಿ ಹೆಚ್ಚಿದ್ದರೂ, ಮಾಧ್ಯಮಿಕ ಹಂತದಲ್ಲಿ ಅದು ಕಡಿಮೆಯಾಗಿ ಅಲ್ಲಿ ಪುರುಷ ಶಿಕ್ಷಕರ ಪ್ರಾಬಲ್ಯ ಕಂಡುಬರುತ್ತದೆ. ಇದಕ್ಕೆ ಸಾಮಾನ್ಯವಾಗಿ ಕೊಡುವ ಕಾರಣವೆಂದರೆ, ಮಹಿಳೆಯರು ತಮ್ಮ ಸ್ವಭಾವಸಹಜವಾಗಿರುವ ಮಾತೃಸ್ವಭಾವದಿಂದ ಎಳೆಮಕ್ಕಳ ಪಾಲನೆಯಲ್ಲಿ ಹೆಚ್ಚು ನಿಪುಣರಾಗಿರುತ್ತಾರೆ. ಆದರೆ ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ವಿಷಯಪರಿಣತಿಯ ಅಗತ್ಯವಿದ್ದು, ಅವರು ಬಹುತೇಕ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಹಾಗಾಗಿ ಮಾಧ್ಯಮಿಕ ಶಾಲಾ ಶಿಕ್ಷಕರಾಗುವುದೆಂದರೆ ಹೆಚ್ಚು ಪ್ರತಿಷ್ಠೆಯುಳ್ಳದ್ದೂ ಮತ್ತು ಹೆಚ್ಚು ಸಂಬಳ ತರುವಂತಹುದೂ ಆಗಿದೆ. ಆದರೆ ಎಳೆಮಕ್ಕಳನ್ನು ನೋಡಿಕೊಳ್ಳಲು ಅಗತ್ಯವಾದ ವಿಶೇಷ ಜ್ಞಾನ ಮತ್ತು ಕೌಶಲ್ಯವನ್ನು ತೀರ 'ಸಾಮಾನ್ಯ' ವಿಚಾರ ಎಂಬಂತೆ ಪರಿಗಣಿಸಿರುವುದು ಸಮಸ್ಯಾತ್ಮಕವಾಗಿದೆ.

ಖ್ಯಾತ ಶಿಕ್ಷಣತಜ್ಞರೂ, ವಿದ್ವಾಂಸರೂ ಆಗಿರುವ ಪ್ರೊ. ಕೃಷ್ಣಕುಮಾರ್ ಅವರು 2012ರಲ್ಲಿ ಬೆಂಗಳೂರಿನಲ್ಲಿ ಮಾಡಿದ ಭಾಷಣವೊಂದರಲ್ಲಿ, ಶಿಕ್ಷಕರು ಸಮಾಜದ ಉನ್ನತಿಗೆ ಅತ್ಯವಶ್ಯವಾದ 'ನಾಗರಿಕ ಕಾರ್ಯ' (civilizational functions)ಗಳನ್ನು ಮಾಡುತ್ತಾರೆ ಎಂದು ವಾದಿಸುತ್ತಾರೆ. ತಮ್ಮ ಇಂದ್ರಿಯಾನುಭವಗಳನ್ನು ಪದಗಳಲ್ಲಿ ಹೇಳುವುದು ಹೇಗೆ, ತಮ್ಮ ಪರಿಸರವನ್ನು ಅವಲೋಕಿಸುವುದು ಹೇಗೆ, ಇತರರೊಂದಿಗೆ ಸಂಭಾಷಣೆ ನಡೆಸುವುದು ಹೇಗೆ ಎಂಬುದನ್ನು ಶಿಕ್ಷಕರು ಹೇಳಿಕೊಡುತ್ತಾರೆ. ಪ್ರಾಥಮಿಕ ಶಾಲಾ ಹಂತದಲ್ಲಿ ಎಲ್ಲಾ ಮಕ್ಕಳು ಹಣ್ಣು, ತರಕಾರಿ, ಪ್ರಾಣಿ, ಪಕ್ಷಿಗಳನ್ನು ಗುರುತಿಸಿ ಹೆಸರಿಸುವುದನ್ನು, ತಮ್ಮ ಸುತ್ತಮುತ್ತಲಿರುವ ದಿನನಿತ್ಯದ ವಸ್ತುಗಳನ್ನು, ಅವುಗಳ ಆಕಾರ ಮತ್ತು ಬಣ್ಣಗಳನ್ನು ಗುರುತಿಸಿ ಹೆಸರಿಸುವುದನ್ನು, ಮನೆಯಲ್ಲಿ ಕಲಿತ ಪದಸಂಪತ್ತನ್ನು ಇನ್ನೂ

ವಿಸ್ತರಿಸಿ, ಬೆಳೆಸುವುದನ್ನು ಕಲಿಯುತ್ತಾರೆ. ಇನ್ನು ಕೆಲವರು ಮನೆಯಲ್ಲಿ ಬಳಸದೆ ಇರುವ ಹೊಸ ಭಾಷೆಯನ್ನು ಕೂಡ ಕಲಿಯುತ್ತಾರೆ. ಹಾಗಾಗಿ, '3R' (ಓದು, ಬರಹ, ಲೆಕ್ಕ)ಗಳನ್ನು ಕಲಿಸುವುದರ ಜೊತೆಜೊತೆಗೆ ಪ್ರಾಥಮಿಕ ಶಾಲಾ ಶಿಕ್ಷಕರು ಮಕ್ಕಳನ್ನು ಸಾಮಾಜಿಕ ಜೀವಿಗಳಾಗಿ ಬೆಳೆಸುವುದರಲ್ಲಿ ಕೂಡ ಪ್ರಮುಖ ಪಾತ್ರವನ್ನು ವಹಿಸುತ್ತಾರೆ.

ಇಂತಹ ಮುಖ್ಯ ಮತ್ತು ನವಿರಾದ ಕಾರ್ಯವೊಂದನ್ನು ಮಾಡಬೇಕಾದರೆ ಅತ್ಯಂತ ಎಚ್ಚರಿಕೆಯ ಯೋಜನೆ ಮತ್ತು ತಯಾರಿ ಅಗತ್ಯವಿರುತ್ತದೆ. ಪ್ರಾಥಮಿಕ ಶಾಲಾಶಿಕ್ಷಕರು ಎಳೆಯ ಮಕ್ಕಳ ಆಸಕ್ತಿಯನ್ನು ಕೆರಳಿಸುವಂತಹ, ಅವರ ಮನಸ್ಸನ್ನು ಪ್ರಚೋದಿಸಿ ಅವರನ್ನು ಕೆಲಸದಲ್ಲಿ ತೊಡಗಿಸುವಂತೆ ಮಾಡುವಂತಹ ಚಾರ್ಟ್‌ಗಳನ್ನು, ನಕ್ಷೆಗಳನ್ನು ಮತ್ತು 3D (ಮೂರು ಆಯಾಮದ) ಮಾಡೆಲ್‌ಗಳನ್ನು ಮಾಡಬೇಕಾಗುತ್ತದೆ. ಸರಳ, ವಿವರಣಾತ್ಮಕ ಉದಾಹರಣೆಗಳ ಮೂಲಕ ಅವರು ಅಮೂರ್ತ ವಿಚಾರಗಳನ್ನು ಮಕ್ಕಳ ವಯಸ್ಸು ಮತ್ತು ಸಂದರ್ಭಕ್ಕೆ ತಕ್ಕಂತೆ ಸರಳ ಭಾಷೆಯಲ್ಲಿ ವಿವರಿಸಬೇಕಾಗುತ್ತದೆ. ವೈವಿಧ್ಯಮಯ ಕಲಿಕಾ ಅವಶ್ಯಕತೆಗಳು ಇರುವ ಸಂದರ್ಭದಲ್ಲಿ ಅವರು ಪ್ರತಿ ವಿದ್ಯಾರ್ಥಿಯ ಕಲಿಕಾ ಅವಶ್ಯಕತೆಗೆ ತಕ್ಕಂತೆ ತಮ್ಮ ಪಾಠಕ್ರಮವನ್ನು ರೂಪಿಸಬೇಕಾಗುತ್ತದೆ. ಈ ಕೌಶಲ್ಯಗಳು ಮಹಿಳೆಯರಿಗೆ ಸಹಜವಾಗಿ ದೈವದತ್ತವಾಗಿ ಬಂದಿರುತ್ತವೆ ಎಂದು ಹೇಳುವ ಮೂಲಕ ನಾವು ಅವರು ಈ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಪಡೆದುಕೊಳ್ಳುವ ತರಬೇತಿಯ ಸರಿಯಾದ ಮೌಲ್ಯವನ್ನು ಅರ್ಥ ಮಾಡಿಕೊಳ್ಳದೇ ಇರುವುದು ಮಾತ್ರವಲ್ಲದೆ, ಪುರುಷರು ಈ ಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರು ಎಂದು ಹೇಳಿದ ಹಾಗೆ ಕೂಡ ಆಗುತ್ತದೆ.

ನಾನು ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಆರಂಭದ ದಿನಗಳಲ್ಲಿ, ನನ್ನ ಜೊತೆ ಡೆನ್ಮಾರ್ಕ್ ದೇಶದ ಒಬ್ಬ ಅತ್ಯಂತ ಪ್ರತಿಭಾನ್ವಿತ ಸಹೋದ್ಯೋಗಿಯಿದ್ದರು. ಸಂಗೀತಗಾರರೂ ಮತ್ತು ಕವಿಯೂ ಆಗಿದ್ದ ಅವರು ತರಗತಿಗೆ ಬರುವಾಗ ತಮ್ಮ ಗಿಟಾರನ್ನು ತರುತ್ತಿದ್ದರು ಮತ್ತು ವಿದ್ಯಾರ್ಥಿಗಳಿಗೆ ಭೂಗೋಳ, ವಿಜ್ಞಾನ ಮತ್ತು ಇತಿಹಾಸವನ್ನು ಹೇಳಿಕೊಡಲು ಪದ್ಯಕಟ್ಟಿ ಗಿಟಾರ್ ಹಿಮ್ಮೇಳದ ಜೊತೆಗೆ ಹಾಡುತ್ತಿದ್ದರು. ತರಗತಿ ಅಧ್ಯಾಪಕರಾಗಿ ಅವರಿಗೆ ತನ್ನ ವಿದ್ಯಾರ್ಥಿಗಳೊಂದಿಗೆ ಅತ್ಯಂತ ಆಪ್ತ ಸಂಬಂಧವಿತ್ತು. ತನ್ನ ವಿದ್ಯಾರ್ಥಿಗಳ ಹುಟ್ಟುಹಬ್ಬಗಳನ್ನು ಅವರು ಹಾಡು ಹಾಡಿ, ಗಿಟಾರ್ ನುಡಿಸಿ ಆಚರಿಸುತ್ತಿದ್ದರು. ಆಗಾಗ್ಗೆ ತನ್ನ ಪುಟ್ಟಮಗುವನ್ನು ತನ್ನ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ಶಾಲೆಗೆ ಕರೆತರುತ್ತಿದ್ದರು. ಇಂತಹ ಸಂಭ್ರಮವನ್ನು ಸಾಧ್ಯಮಾಡುತ್ತಿದ್ದ ಆ ಶಿಕ್ಷಕರನ್ನು ವಿದ್ಯಾರ್ಥಿಗಳು ಬಹುವಾಗಿ ಹಚ್ಚಿಕೊಂಡಿದ್ದರು ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಈ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಶಾಂತ, ಕಾಳಜಿಯುಳ್ಳ, ಮೃದುವಾಗಿರುವ ಮತ್ತು ಸಣ್ಣ ಮಕ್ಕಳ ಸಾನಿಧ್ಯವನ್ನು ಖುಶಿಪಡುವ ಪುರುಷತ್ವವನ್ನು ಮೆಚ್ಚಲು ಕಲಿಸಿದರು. ದುರಾದೃಷ್ಟವಶಾತ್ ಅವರು ತಮ್ಮ ದೇಶಕ್ಕೆ ಹೊರಟುಹೋದ ಮೇಲೆ ಆ ಶಾಲೆಯ ಪ್ರಾಥಮಿಕ ವಿಭಾಗವು ಮತ್ತೆ ಮಹಿಳಾ ಪ್ರಧಾನ ವಿಭಾಗವಾಯಿತು. ಪುರುಷ ಶಿಕ್ಷಕರೆಲ್ಲರೂ ಹೈಸ್ಕೂಲ್‌ನಲ್ಲಿ ಅಥವ ದೈಹಿಕ ಶಿಕ್ಷಣ ವಿಭಾಗದಲ್ಲಿದ್ದರು. ಶಾಲಾ ಪಠ್ಯಕ್ರಮದಲ್ಲಿ ಗಂಡಸರು ನಿರ್ವಹಿಸುವ ಪಾತ್ರಗಳು ಮತ್ತು ಹೆಂಗಸರು ನಿರ್ವಹಿಸುವ ಪಾತ್ರಗಳು ಎಂಬ ರೂಢಮಾದರಿಗಳು ಮತ್ತೆ ಸುಪ್ತವಾಗಿ ತಲೆ ಎತ್ತತೊಡಗಿದವು.

ನಾನು ಮೊದಲೇ ಹೇಳಿದಂತೆ, ದೀರ್ಘ ರಜೆಗಳು ಮತ್ತು ನಿತ್ಯ ಕೆಲಸದ ಅವಧಿ ಕಡಿಮೆ ಇರುವ ಕಾರಣಕ್ಕೆ ಮನೆಕೆಲಸ ಮತ್ತು ಸಂಬಳ ತರುವ ಉದ್ಯೋಗ ಎರಡನ್ನೂ ಸರಿದೂಗಿಸುವಲ್ಲಿ ಇತರ ಬಿಳಿಕಾಲರ್ ಹುದ್ದೆಗಳಿಗಿಂತ ಶಿಕ್ಷಕ ವೃತ್ತಿ ಹೆಚ್ಚು ಅನುಕೂಲಕರ ಎಂಬ ಅಭಿಪ್ರಾಯ ಇದೆ. ಆದರೆ ಶಿಕ್ಷಕರು ಶಾಲೆಯಿಂದ ಮನೆಗೆ ಹೊತ್ತು ತರುವ ಮೌಲ್ಯಮಾಪನದ ಕೆಲಸ ಅಥವ ವಿದ್ಯಾರ್ಥಿಗಳ ನೋಟುಬುಕ್ಕುಗಳನ್ನು ತಿದ್ದುವ ಕೆಲಸವನ್ನು ಅಥವ ಪಾಠದ ತಯಾರಿಯನ್ನು ಈ ಅಭಿಪ್ರಾಯವು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಶಿಕ್ಷಕರು ಬೇಗನೆ ಮನೆಗೆ ಸೇರಿದರೂ ವಿದ್ಯಾರ್ಥಿಗಳ ಕೆಲಸದ ಮೌಲ್ಯಮಾಪನ ಮಾಡುತ್ತಾ ತಡರಾತ್ರಿಯವರೆಗೆ ಕೆಲಸ ಮಾಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಶಿಕ್ಷಕ ವೃತ್ತಿಯ ಸ್ವರೂಪವನ್ನು ಕುರಿತು ನಾನು ಒಂದು ಅಧ್ಯಯನ ಕೈಗೊಂಡಿದ್ದೆ, ಅದಕ್ಕೆ ನಾನು ಸಂದರ್ಶಿಸಿದ ಒಬ್ಬ ನಿವೃತ್ತ ಶಿಕ್ಷಕಿಯ ಪ್ರಕಾರ ಅವರು ತಮ್ಮ 77 ಮಂದಿ ವಿದ್ಯಾರ್ಥಿಗಳ ನೋಟುಪುಸ್ತಕಗಳನ್ನು ತಿದ್ದಲು ದಿನಾ ಬೆಳಗ್ಗೆ ಮೂರು ಗಂಟೆಗೆ ಏಳುತ್ತಿದ್ದರು! ಈ ತಿದ್ದುವ ಕೆಲಸದ ಜೊತೆಗೇ ನಾನು ಮೊದಲೇ ಹೇಳಿದ ಪಾಠದ ತಯಾರಿಯ ಕೆಲಸ ಕೂಡ ನಡೆಯುವುದು ಶಾಲೆ ಬಿಟ್ಟ ನಂತರವೇ.

ಸ್ತ್ರೀವಾದಿ ಚಿಂತಕರಾದ ಆ್ಯನ್ ಓಕ್ಲೇ ಅವರು 1970ರ ದಶಕದಲ್ಲೇ ಹೇಳಿದ ಹಾಗೆ, ಮಕ್ಕಳು ಮತ್ತು ಗಂಡ ಬೆಳಗ್ಗೆ ಶಾಲೆ ಮತ್ತು ಕಚೇರಿಗೆ ತೆರಳಿದ ನಂತರ ಮನೆಯಲ್ಲಿ ಹೆಂಗಸರು ಮಾಡುವ ಕೆಲಸ ಇತರರಿಗೆ ಗೋಚರಿಸುವುದಿಲ್ಲ; ಹಾಗಾಗಿ ಕುಟುಂಬ ಮತ್ತು ಸಮಾಜ ಅದನ್ನು ನಗಣ್ಯ ಎಂದು ಪರಿಗಣಿಸುತ್ತದೆ. ಅದೇ ರೀತಿ ಶಿಕ್ಷಕರು ಮೌಲ್ಯಮಾಪನ ಮತ್ತು ಪಾಠದ ತಯಾರಿಯಲ್ಲಿ ವ್ಯಯಿಸುವ ಕೆಲಸ ವಿದ್ಯಾರ್ಥಿಗಳು, ಅವರ ಪಾಲಕರು ಅಥವ ಶಾಲಾ ಆಡಳಿತ ಮಂಡಳಿಯ ಗಮನಕ್ಕೆ ಬರುವ ಸಂದರ್ಭ ವಿರಳ; ಹೆಂಗಸರು ಮನೆಯಲ್ಲಿ ಮಾಡುವ ಇತರ ಕೆಲಸದಂತೆ, ಈ ಕೆಲಸ ಕೂಡ ಮನೆಯಲ್ಲಿಯೇ ನಡೆಯುವುದರಿಂದ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ 'ಅಗೋಚರವನ್ನಾಗಿಸಲಾಗಿದೆ'.

ಸಂಬಳ ತರುವ ಉದ್ಯೋಗದಲ್ಲಿ ನಿರತರಾಗಿರುವ ಇತರ ಮಹಿಳೆಯರಂತೆ, ಶಿಕ್ಷಕಿಯರು ಕೂಡ ಬಹು–ಕಾರ್ಯಪಟುಗಳಾಗಿರುತ್ತಾರೆ; ತಮ್ಮ ತರಗತಿಯ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವುದು, ಮಾರನೆ ದಿನದ ತರಗತಿಗೆ ಸಿದ್ಧತೆ ನಡೆಸುವುದರ ಜೊತೆಜೊತೆಗೆ ಅಡುಗೆ ಮಾಡುವುದು, ತೊಳೆಯುವುದು, ಬಳಿಯುವುದು, ಮನೆಮಕ್ಕಳ ಮನೆಕೆಲಸ (ಹೋಂವರ್ಕ್) ನೋಡಿಕೊಳ್ಳುವುದು, ಇತ್ಯಾದಿ ಕೆಲಸಗಳನ್ನು ನಿಭಾಯಿಸುತ್ತಿರುತ್ತಾರೆ. ನನ್ನ ಸಹೋದ್ಯೋಗಿಗಳಾದ ಎಸ್. ಇಂದುಮತಿ ಮತ್ತು ಇಂದಿರಾ ವಿಜಯಸಿಂಹ ಅವರು ಕೆಲವು ವರ್ಷಗಳ ಹಿಂದೆ ಕೈಗೊಂಡ ಒಂದು ಅಧ್ಯಯನದ ಪ್ರಕಾರ, ಸಾಮಾನ್ಯವಾಗಿ ಪುರುಷ ಶಿಕ್ಷಕರು ಶಾಲಾ ಸಮಯದ ಬಳಿಕ ಹೆಚ್ಚಾಗಿ ಕ್ರೀಡೆಯಲ್ಲಿ, ಮನರಂಜನಾ ಚಟುವಟಿಕೆಗಳಲ್ಲಿ ಅಥವ ತಮ್ಮ ಸ್ನೇಹಿತರೊಂದಿಗೆ ಹರಟೆಹೊಡೆಯುತ್ತಾ ಕಳೆದರೆ ಶಿಕ್ಷಕಿಯರು ಶಾಲೆಬಿಟ್ಟ ಕೂಡಲೆ ಮನೆಗೆ ಹೋಗಿ ತಮ್ಮ ಮನೆಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ. ವೃತ್ತಿಪರ ಬೆಳವಣಿಗೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಯಾರಿಗೆ ಹೆಚ್ಚು ಸಮಯ ಲಭ್ಯವಾಗುತ್ತದೆ ಎಂಬುದು ಇದರಿಂದ ನಮಗೆ ತಿಳಿಯುತ್ತದೆ.

ಈ ಅಂಶ ನಾನು ಹೇಳಬೇಕಾಗಿರುವ ಕೊನೆಯ ವಿಚಾರದೆಡೆಗೆ ಬೆಳಕು ಚೆಲ್ಲುತ್ತದೆ; ಅದೇನೆಂದರೆ ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ನಾಯಕತ್ವ ಸ್ಥಾನದಲ್ಲಿರುವ ಮಹಿಳೆಯರ ಸಂಖ್ಯೆ ಅತಿ ಕಡಿಮೆ. ವಿದ್ಯಾರ್ಥಿನಿಯರಿಗಾಗಿಯೇ ಇರುವ ಖಾಸಗಿ ಶಾಲೆಗಳನ್ನು ಬಿಟ್ಟರೆ, ಬೇರೆ ಶಾಲೆಗಳಲ್ಲಿ ಮಹಿಳಾ ಮುಖ್ಯೋಪಾಧ್ಯಾಯರು ನಮಗೆ ಕಾಣಸಿಗುವುದು ಅತಿ ವಿರಳ. ಮಹಿಳೆಯರಿಗೆ ಇರುವ ಕೌಟುಂಬಿಕ ಜವಾಬ್ದಾರಿಯ ಕಾರಣಕ್ಕಾಗಿ ಅವರು ನಿರ್ವಹಣಾತ್ಮಕ ಹುದ್ದೆಗಳನ್ನು ನಿರ್ವಹಿಸಲು ಅಗತ್ಯವಾದ ಕೌಶಲ್ಯವನ್ನು ಅಥವ ಅದಕ್ಕೆ ಬೇಕಾದ ಅರ್ಹತೆಯನ್ನು ಬಲಗೊಳಿಸಲು ಬೇಕಾದ ತರಬೇತಿಯನ್ನು ಪಡೆಯಲು ಅವರಿಗೆ ಸಮಯ ಮತ್ತು ಸಂದರ್ಭದ ಅಭಾವ ಇರುತ್ತದೆ. ಹೆಚ್ಚಿನ ಮಹಿಳೆಯರು ತಮ್ಮ ವೃತ್ತಿಬದುಕನ್ನು ತರಗತಿ ಶಿಕ್ಷಕರಾಗಿಯೇ ಕಳೆದುಬಿಡುತ್ತಾರೆ; ಹೆಚ್ಚೆಂದರೆ ಅವರು ಪಾಠ ಮಾಡುವ ವಿಷಯ ಅಥವ ಹೋಗುವ ತರಗತಿ ಬದಲಾಗಬಹುದು ಅಷ್ಟೆ. ಇದರ ಪರಿಣಾಮವಾಗಿ ಶಾಲೆಗಳು ಕೂಡ ಮನೆ ಮತ್ತು ಸಮಾಜದಲ್ಲಿ ಕಾಣುವ ಸಾಂಪ್ರದಾಯಿಕ ಪುರುಷ ಪ್ರಧಾನ ಅಧಿಕಾರ ವ್ಯವಸ್ಥೆಯನ್ನೇ ಬಿಂಬಿಸುತ್ತವೆ. ಇದು ತರಗತಿಯಲ್ಲಿ ಶಿಕ್ಷಕಿಯರ ಹತೋಟಿಯನ್ನು ಕುಂದಿಸುವುದಲ್ಲದೆ, ಪುರುಷರು ನಾಯಕತ್ವ ಸ್ಥಾನದಲ್ಲಿ ಮತ್ತು ಮಹಿಳೆಯರು ಪಾಲನೆ ಪೋಷಣೆಯಲ್ಲಿ ತೊಡಗಿಕೊಳ್ಳಬೇಕು ಎಂಬ ಸಾಂಪ್ರದಾಯಿಕ ರೂಢಿಗತ ಗಂಡು ಮತ್ತು ಹೆಣ್ಣು ಪಾತ್ರಗಳು ನಿರ್ವಹಿಸಬೇಕಾದ ಜವಾಬ್ದಾರಿಯ ನಿರೀಕ್ಷೆಗಳನ್ನು ಬಲಪಡಿಸುತ್ತವೆ.

ಶಿಕ್ಷಣದ ಪ್ರಮುಖ ಉದ್ದೇಶ ಸಾಮಾಜಿಕ ಬದಲಾವಣೆಯನ್ನು ತರುವುದು ಮತ್ತು ವಿದ್ಯಾರ್ಥಿಗಳು ಸಮಾಜದಲ್ಲಿ ಬೇಡುಬಿಟ್ಟಿರುವ ಸಿದ್ಧ, ಪ್ರಶ್ನಾತೀತ ಅನಿಸಿಕೆಗಳನ್ನು ಪ್ರಶ್ನಿಸುವಂತೆ ಅವರನ್ನು ರೂಪುಗೊಳಿಸುವುದೇ ಆಗಿದ್ದಲ್ಲಿ, ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ವಿವಿಧ ವಿಭಾಗಗಳಲ್ಲಿ ಹಂಚಿ ಹೋಗಿರುವ ಮಹಿಳೆಯರು ಮತ್ತು ಪುರುಷರ ನಡುವಿನ ಅಸಮಾನ ಅನುಪಾತವನ್ನು ಕೂಡ ನಾವು ಪ್ರಶ್ನಿಸಬೇಕಾಗುತ್ತದೆ. ಪ್ರೌಢಶಿಕ್ಷಣ ಹಂತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನೂ ನೇಮಿಸುವುದಲ್ಲದೆ, ಪ್ರಾಥಮಿಕ ಹಂತದ ಶಿಕ್ಷಣವು ಪುರುಷರನ್ನೂ ಸೆಳೆಯುವಂತೆ ಮಾಡಬೇಕಾಗುತ್ತದೆ. ಸಾಂಪ್ರಾದಾಯಿಕ ಸ್ತ್ರೀ–ಪುರುಷ ರೂಢಮಾದರಿಗಳನ್ನು ಶಿಕ್ಷಕರು ಮತ್ತು ಶಿಕ್ಷಕಿಯರು ತರಗತಿಯಲ್ಲಿ ಪ್ರದರ್ಶಿಸದಂತೆ ಅವರಲ್ಲಿ ಸೂಕ್ಷ್ಮಜ್ಞತೆಯನ್ನು ಬೆಳೆಸಬೇಕಾಗುತ್ತದೆ ಮತ್ತು ಮಹಿಳೆಯರು ನಾಯಕತ್ವದ ಪಾತ್ರಗಳನ್ನು ವಹಿಸಿಕೊಳ್ಳಲು ಸೂಕ್ತ ಅವಕಾಶ ನೀಡಬೇಕಾಗುತ್ತದೆ ಮತ್ತು ಅದನ್ನು ನಿರ್ವಹಿಸಲು ಸಾಕಷ್ಟು ತರಬೇತಿಯನ್ನು ಒದಗಿಸಬೇಕಾಗುತ್ತದೆ.

ಈ ಕ್ರಮಗಳನ್ನು ನಿಷ್ಠೆಯಿಂದ ಮತ್ತು ಶ್ರದ್ಧೆಯಿಂದ ಜಾರಿಗೆ ತಂದರೆ ಮುಂದಿನ ಹತ್ತು ಹದಿನೈದು ವರ್ಷಗಳಲ್ಲಿ ನಾವು ಶಿಕ್ಷಕ ವೃತ್ತಿಯಲ್ಲಿರುವ ಲಿಂಗಾಧಾರಿತ ಕೆಲಸದ ಬೇರ್ಪಡಿಸುವಿಕೆಯನ್ನು ಇಲ್ಲವಾಗಿಸಿ, ವೃತ್ತಿಯಲ್ಲಿ ಹೆಚ್ಚಿನ ಲಿಂಗ ಸಮಾನತೆ ತರಲು ಸಾಧ್ಯವಾಗುವುದಲ್ಲದೆ, ಯುವ ತಲೆಮಾರು ಶಿಕ್ಷಣದಲ್ಲಿ, ಮಕ್ಕಳ ಪಾಲನೆ ಪೋಷಣೆಯಲ್ಲಿ ಅಷ್ಟೆ ಅಲ್ಲದೆ ಬದುಕಿನುದ್ದಕ್ಕೂ ಸ್ತ್ರೀ ಮತ್ತು ಪುರುಷರು ನಿರ್ವಹಿಸಬೇಕಾದ ಪಾತ್ರಗಳನ್ನು ಕುರಿತಂತೆ ಹೆಚ್ಚು ಸಮನ್ವಯ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

**References**


- Belliappa, J and de Souza, S. 'Gender and the Limits of Agency: Exploring the Memories of Anglo-Indian School Teachers in Bangalore' at Orecomm Festival: Memory on Trial, September, 2013, Malmo Sweden
- DISE/ National University of Educational Planning and Administration (2012) Secondary Education in India: Progress towards Universalisation: DISE 2012-13 (Provisional, as on 30th September2012) UDISE, New Delhi
- DISE/National University of Educational Planning and Administration (2013) Primary Education in India: Progress towards UEE Flash Statistics DISE 2013-14 (Provisional, as on 30th September2013) UDISE, New Delhi

- Indumathi. S and Indira Vijaysimha (2011) 'Women in teaching: impossible fiction or fulfilling lives?' CESI Conference, Hyderabad 12-14th November, 2011
- Krishna Kumar, 'What Teachers Do' Ten Talks The Teacher Foundation Bangalore, Novemeber, 2012
- Manjrekar, N. (2013) 'Women School Teachers in New Times: Some Preliminary Reflections' Indian Journal of Gender Studies 20: 335
- Mehta, A.C. (2011) Analytical Report: 2008-09: Elementary Education: Progress towards UEE National University of Educational Planning and Administration http://dise.in/Downloads/Publications/Publications%202008-09/AR%202008-09/Introduction.pdf
- Oakley, A. (1975) The Sociology of Housework Pantheon Books, New York



**ಜ್ಯೋತ್ಸ್ನಾ** ಅವರು ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರಿಗೆ ಈ ಹಿಂದೆ ಪ್ರಾಥಮಿಕ ಶಾಲಾ ಹಂತದಲ್ಲಿ ಸಮಾಜಿಕ ಅಧ್ಯಯನ ಮತ್ತು ಭಾಷಾ ಕಲೆ ಹಾಗು ಪ್ರೌಢಶಾಲಾ ಹಂತದಲ್ಲಿ ಸಮಾಜಶಾಸ್ತ್ರವನ್ನು ಬೋಧಿಸಿದ ಅನುಭವ ಇದೆ. ಅವರು ಪ್ರಸ್ತುತ ಶಾಲಾ ಶಿಕ್ಷಕರ ನಡುವೆ ಲಿಂಗ ಮತ್ತು ವೃತ್ತಿಗಳ ನಡುವೆ ಗುರುತಿಸುವಿಕೆ ಹೇಗೆ ನಡೆಯುತ್ತದೆ ಎನ್ನುವುದನ್ನು ಕುರಿತಂತೆ ಸಂಶೋಧನಾ ಅಧ್ಯಯನದಲ್ಲಿ ತೊಡಗಿದ್ದಾರೆ. ಅವರ ಇ ಮೇಲ್ ವಿಳಾಸ: jyothsna.belliappa@apu.edu.in **ಅನುವಾದಕರು**: ರೋಸಿ ಡಿಸೌಜ **ಪರಿಶೀಲನೆ**: ಇನಿ ಪೆರಿಯೋಡಿ.